ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Monday, the 6th July 1981/Ashada 15, 1903 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI K. H. RANGANATH) in the Chair.]

SRI K. BHASKAR NAIDU.—Sir after seeing in the papers that you had escaped a serious accident and God has provided you to be here, we assume that it is our good fortune. I think God had been very kind to you and we pray that we continue to have lot of time with you.

MR. SPEAKER.—Thank you.

STARRED QUESTIONS
(to which oral answers were given)

Roads in Channapatna Taluk

194 SRI D. T. RAMU (Channapatna).–Will the Minister for Public Works be pleased to state.–

(a) the extent of State Fund Roads and R.C, Roads at Channapatna Taluk, Bangalore District.

(b) out of this, the extent of road asphalted.

(c) the extent of roads of other taluks and the extent of road asphalted?

SRI KAGODU THIMMAPPA (Miniter for Public Works).—

(a) The extent of State Funds Roads–244 Kms. The extent of R.C. Roads–250 Kms.

(b) 69 Kms. of Road has been asphalted.

(c) Details are noted here under.–

Extent in Kms.

	Taluk	State Fund Road	R.C. Road	Tar Road
1	Bangalore South	388	169	151
2	Bangalore North	250	110	117
3	Doddaballapur	315	180	139
4	Hosakote	341	157	141
5	Nelamangala	248	140	76
6	Devanahalli	364	167	98
7	Anekal	230	281	99
8	Ramanagar	245	109	110
9	Kanakapur	390	209	93
10	Magadi	402	274	117
	Total	3,173 Kms.	1,796 Kms.	1,141 Kms

ಶ್ರೀ ಡಿ.ಟಿ. ರಾಮು —ಮಾನ್ಯ ಅಧ್ಯಕ್ಷರೇ ನಾನು ಕೇಳಿದ (ಅ) ಪ್ರಶ್ನೆಗೆ ಉತ್ತರವಾಗಿ ೬೯ ಕಿಲೋ ಮೀಟರ್ ಎಂದು ಹೇಳಿದ್ದಾರೆ. ಇದರ ಸರಿಯಾದ ಫಿಗರ್ಸನ್ನು ಒದಗಿಸಿಕೊಡುತ್ತೀರಾ?

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ ಈಗ ೬೯ ಕಿ.ಮೀ.ರಸ್ತೆಗೆ ಟಾರ್ ಹಾಕಲಾಗಿದೆ. ಬೇಕಾದರೆ ನಾನು ಫಿಗರ್ಸನ್ನು ತರಿಸಿಕೊಡುತ್ತೇನೆ.

ಶ್ರೀ ಡಿ.ಟಿ. ರಾಮು.—ಇಲ್ಲಿ ತಾವು ಕೊಟ್ಟಿರುವ ವಿವರಗಳನ್ನು ನೋಡಿದಾಗ ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಡಿಮೆ ಪ್ರಮಾಣದಲ್ಲಿ ಟಾರ್ ಹಾಕಲಾಗಿದೆ. ಇನ್ನು ಮುಂದೆಯಾದರೂ ಈ ತಾಲ್ಲೂಕ್‌ಗೆ ಹೆಚ್ಚಿನ ಅದ್ಯತೆ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಹೊಸದ ದೃಷ್ಟಿಯನ್ನು ಇಟ್ಟುಕೊಂಡು ಅದ್ಯತೆ ಕೊಡುತ್ತೇವೆ.

ಶ್ರೀ ಡಿ.ಟಿ. ರಾಮು.—ಹಿಂದೆ ಮಾನ್ಯ ಬಂಗಾರಪ್ಪನವರು ಈ ಇಲಾಖೆಯ ಮಂತ್ರಿಗಳಾಗಿ ದ್ದಾಗ ಈ ರಸ್ತೆಗಳ ಬಗ್ಗೆ ಒಂದು ಸಹಸ್ರ ಕೋಟಿ ರೂಪಾಯಿಗಳ ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಿ ಈ ಸಭೆಯ ಮುಂದೆ ಇಟ್ಟಿದ್ದರು. ಈಗ ತಾವು ಅದಕ್ಕೆ ವಿಶ್ವಬ್ಯಾಂಕಿನಿಂದ ಸಹಾಯ ಪಡೆದುಕೊಂಡು ಆ ಯೋಜನೆಯನ್ನು ಕಾರ್ಯಗತಗೊಳಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಪ್ರಶ್ನೆಯಲ್ಲಿ ಅದು ಉದ್ಭವವಾಗುವುದಿಲ್ಲ.

† Indicates that remarks or speeches have not been revised by the member concerned.